**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ217/2018** **ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **28.10.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ 1, 2** ಮತ್ತು **11** ನೇ ಪ್ರತಿವಾದಿಗಳ ಪರ ಶ್ರೀ ಬಿ.ಎಂ.ಎನ್ ವಕೀಲರಿಂದಃ

ನಾನು ಹುಟ್ಟಿದ ದಿನಾಂಕ ನನಗೆ ಗೊತ್ತಿರುವುದಿಲ್ಲ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಈಗ **57** ವರ್ಷ ವಯಸ್ಸಾಗಿರುತ್ತದೆ. ನನಗೆ ಈಗ **57** ವರ್ಷ ವಯಸ್ಸು ಎಂದು ತೋರಿಸಲು ದಾಖಲೆಯನ್ನು ನೀಡಿರುತ್ತೇನೆ. ಸಾಕ್ಷಿ ಮುಂದುವರಿದು ಆಧಾರ ಕಾರ್ಡನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳಲ್ಲಿ ಆಧಾರ ಕಾರ್ಡು ಇರುವುದಿಲ್ಲ ಎಂದರೆ ಸರಿಯಲ್ಲ.

ಈ ದಾವೆಯನ್ನು ಹಾಕಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಮಾದನಾಯಕ ಮತ್ತು ಸಿದ್ದಮ್ಮ ಗಂಡ-ಹೆಂಡತಿ ಎಂದರೆ ಸಾಕ್ಷಿಯು ಸಿ.ಮಾದನಾಯಕ ಮತ್ತು ಸಿದ್ದಮ್ಮ ಗಂಡ-ಹೆಂಡತಿ ಎಂದು ನುಡಿಯುತ್ತಾರೆ. ಸದರಿ ಸಿದ್ದಮ್ಮರವರನ್ನು ಸಣ್ಣಮ್ಮ ಎಂದು ಸಹ ಕರೆಯುತ್ತಿದ್ದರು ಎಂದರೆ ಸರಿ. ನಾನು ಹಾಕಿದ ದಾವೆಯ ವಾದಪತ್ರದಲ್ಲಿ ನನ್ನ ತಾತನ ಹೆಸರು ಸಿ.ಮಾದನಾಯಕ ಎಂದು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ.

**1** ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಓದಿ ತಿಳಿಸಿಕೊಂಡಿರುತ್ತೇನೆ. ನನ್ನ ತಾತ ಮಾದನಾಯಕ ಮತ್ತು ಸಿದ್ದಮ್ಮರವರಿಗೆ ಒಟ್ಟು **8** ಜನ ಮಕ್ಕಳು ಎಂದರೆ ಸಾಕ್ಷಿಯು **6** ಜನ ಮಕ್ಕಳು ಎಂದು ನುಡಿಯುತ್ತಾರೆ. ಸದರಿಯವರಿಗೆ **6** ಜನ ಮಕ್ಕಳು ಎಂದು ತೋರಿಸಲು ತಹಶೀಲ್ದಾರರವರು ನೀಡಿರುವ ವಂಶ ವೃಕ್ಷವನ್ನು ಹಾಜರುಪಡಿಸಿರುವುದಿಲ್ಲ. ಮಾದನಾಯಕರವರ ಮೊದಲನೇಯ ಮಗಳ ಹೆಸರು ಮರಮ್ಮ ಎಂದು ಇದ್ದು, ಸದರಿಯವರನ್ನು ಸಿದ್ದಮ್ಮ ಎಂದು ಸಹ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಮಾದನಾಯಕನ ಅಳಿಯನ ಹೆಸರು ಅಮಾಸ್ಯೆ ನಾಯಕ ಎಂದರೆ ನನಗೆ ಗೊತ್ತಿರುವುದಿಲ್ಲ. ಬಸಮ್ಮ, ಮರಮ್ಮ, ಕೃಷ್ಣಯ್ಯ, ಚಿಕ್ಕಯನ್ನಮ್ಮ, ಹನುಮಪ್ಪ, ಮತ್ತು ಜವರನಾಯಕ ರವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿಯವರು ಮರಮ್ಮರವರ

ಮಕ್ಕಳು ಎಂದರೆ ಸರಿಯಲ್ಲ. ಸದರಿಯವರಲ್ಲಿ ಕೃಷ್ಣಯ್ಯ ರವರು ತೀರಿಕೊಂಡಿದ್ದು, ಅವರಿಗೆ ಭಾಗ್ಯಮ್ಮ ಎಂಬ ಹೆಂಡತಿ ಮತ್ತು ಮೂರ್ತಿ ಎನ್ನುವ ಮಗ ಇರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮಾದನಾಯಕನ 2 ನೇ ಮಗಳ ಹೆಸರು ಸಿದ್ದಮ್ಮ ಎಂದು ಇದ್ದು, ಅವರನ್ನು ಸಣ್ಣನಾಯಕರವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮಾದನಾಯಕನ 3 ನೇ ಮಗಳ ಹೆಸರು ಕಮಲಮ್ಮ ಎಂದರೆ ಸರಿ. ಸದರಿಯವರು ಈಗ ತೀರಿಕೊಂಡಿದ್ದು, ಅವರಿಗೆ ಮರಮ್ಮ, ಸಪ್ಪಯ್ಯ, ಜಯಮ್ಮ, ಸಿದ್ದಾಪಾಜ್ಜಿ ಮತ್ತು ಶಿವಮ್ಮ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ.

ಮಾದನಾಯಕ ಮತ್ತು ಸಿದ್ದಮ್ಮ ಅಲಿಯಾಸ ಸಣ್ಣಮ್ಮರವರ 4 ನೇ ಮಗ ನನ್ನ ತಂದೆ ಇದ್ದು, ಸದರಿಯವರ ಹೆಸರು ಮಾದನಾಯಕ ಎಂದರೆ ಸರಿ. ಸದರಿಯವರ 5 ನೇ ಮಗಳ ಸುಂದರಮ್ಮ ಎಂದರೆ ಸರಿ. ಸದರಿಯವರ 6 ನೇ ಮಗ ಅಪ್ಪಾಜ್ಜಿ ಎಂದರೆ ಸರಿ. ಅಪ್ಪಾಜ್ಜಿಯವರು ಈಗ ತೀರಿಕೊಂಡು, ಸುಮಾರು 1 ವರ್ಷಗಳಾಗಿರುತ್ತವೆ. ಸದರಿ ಅಪ್ಪಾಜ್ಜಿರವರಿಗೆ ಹೆಂಡತಿ-ಮಕ್ಕಳು ಇರುವುದಿಲ್ಲ. ಮಾದನಾಯಕ ಮತ್ತು ಸಿದ್ದಮ್ಮ ಅಲಿಯಾಸ ಸಣ್ಣಮ್ಮರವರ 7 ನೇ ಮಗ ಸಿದ್ದನಾಯಕ ಅಲಿಯಾಸ ಪಾಪಣ್ಣ ಎಂದರೆ ಸರಿ. ಸದರಿಯವರ ಕೊನೆಯ ಮಗಳ ಹೆಸರು ಶಿವಮ್ಮ ಎಂದರೆ ಸರಿ. ಪ್ರಸ್ತುತ ನನ್ನ ತಾಯಿ ನನ್ನೊಂದಿಗೆ ವಾಸ ಮಾಡುತ್ತಿರುತ್ತಾಳೆ. ನಾನು, ನನ್ನ ತಾಯಿ ಹಾಗೂ ಅಣ್ಣ-ತಮ್ಮಂದಿರು ಒಟ್ಟಾಗಿ ವಾಸ ಮಾಡುತ್ತಿದ್ದೇವೆ. ಮಾದನಾಯಕ ಮತ್ತು ಸಿದ್ದಮ್ಮರವರ ಎಲ್ಲಾ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನ ತಾತ ಮಾದನಾಯಕ ಯಾವಾಗ ತೀರಿಕೊಂಡಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಸದರಿಯವರು ತೀರಿಕೊಳ್ಳುವ ಸಮಯದಲ್ಲಿ ನಾನು ಹುಟ್ಟಿರಲಿಲ್ಲ. ಈ ದಾವೆ ಹಾಕುವ ಸಮಯದಲ್ಲಿ ನನ್ನ ಅಜ್ಜಿ ಸಿದ್ದಮ್ಮ ತೀರಿಕೊಂಡು ಸುಮಾರು 35 ವರ್ಷಗಳಾಗಿತ್ತು. ಸದರಿಯವರು ತೀರಿಕೊಳ್ಳುವ ಸಮಯದಲ್ಲಿ ಪಾಪಣ್ಣರವರೊಂದಿಗೆ ವಾಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅಪ್ಪಾಜ್ಜಿರವರೊಂದಿಗೆ ವಾಸ ಮಾಡುತಿದ್ದರು ಎಂದು ನುಡಿಯುತ್ತಾರೆ. ಸಿದ್ದಮ್ಮರವರು ಉತ್ತರಾಧಿ ಕ್ರಿಯೆಯನ್ನು ಪಾಪ್ಪಣರವರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅಪ್ಪಾಜ್ಜಿರವರು ಮಾಡಿರುತ್ತಾರೆ ಎಂದು

ನುಡಿಯುತ್ತಾರೆ. ಸಿದ್ದಮ್ಮರವರ ಉತ್ತರಾದಿ ಕ್ರಿಯೆಯನ್ನು ಅಪ್ಪಾಜ್ಜಿರವರು ಮಾಡಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

ನಿಪಿ-1 ವಿಭಾಗ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ದಾಖಲೆಯ ಬಗ್ಗೆ ನನ್ನದು ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ಆಸ್ತಿಗಳನ್ನು ಎ ಹಾಗೂ ಬಿ ಷೆಡ್ಯೂಲ್ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಎ ಷೆಡ್ಯೂಲ್ ಆಸ್ತಿಯನ್ನು ಸಿದ್ದಮ್ಮ ಮತ್ತು ಪಾಪ್ಪಣ್ಣರವರಿಗೆ ಹಾಗೂ ಬಿ ಷೆಡ್ಯೂಲ್ ಆಸ್ತಿಯನ್ನು ನನ್ನ ತಂದೆ ಮಾದನಾಯಕ ಮತ್ತು ಅಪ್ಪಾಜ್ಜಿರವರಿಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಎ ಷೆಡ್ಯೂಲ್ ಆಸ್ತಿದಾರರಿಗೆ ಬಿ ಷೆಡ್ಯೂಲ್ ಆಸ್ತಿಯ ಮೇಲೆ ಹಕ್ಕು ಇರುವುದಿಲ್ಲ ಹಾಗೂ ಬಿ ಷೆಡ್ಯೂಲ್ ಆಸ್ತಿದಾರರಿಗೆ ಎ ಷೆಡ್ಯೂಲ್ ಆಸ್ತಿಯ ಮೇಲೆ ಹಕ್ಕು ಇರುವುದಿಲ್ಲ ಎಂದು ನಮೂದು ಇರುತ್ತದೆ ಎಂದರೆ ಸರಿ.

ಬಿ ಷೆಡ್ಯೂಲ್ ನ ಸರ್ವೇ ನಂ.75 ಆಸ್ತಿಯು ನಮ್ಮ ಬಳಿ ಇರುತ್ತದೆ. ಸರ್ವೇ ನಂ.233/4 19 ಗುಂಟೆ ಆಸ್ತಿಯು ಅಪ್ಪಾಜ್ಜಿರವರ ಹತ್ತಿರ ಇರುತ್ತದೆ. ಸರ್ವೇ ನಂ.70/2 ರಲ್ಲಿ 1 ಗುಂಟೆ ಆಸ್ತಿಯು ನಮ್ಮ ಸ್ವಾಧೀನದಲ್ಲಿ ಇರುವುದಿಲ್ಲ. ಸರ್ವೇ ನಂ.70/3 ರಲ್ಲಿ 2 ಗುಂಟೆ ಆಸ್ತಿಯು ನಮ್ಮ ಸ್ವಾಧೀನದಲ್ಲಿ ಇರುವುದಿಲ್ಲ. ಸರ್ವೇ ನಂ.68/16 ರಲ್ಲಿ 1 ½ ಗುಂಟೆ ಆಸ್ತಿಯು ನಮ್ಮ ಸ್ವಾಧೀನದಲ್ಲಿ ಇರುವುದಿಲ್ಲ. ಸರ್ವೇ ನಂ.69/1 ರಲ್ಲಿ 1 ಗುಂಟೆ ಆಸ್ತಿಯು ನಮ್ಮ ಸ್ವಾಧೀನದಲ್ಲಿ ಇರುವುದಿಲ್ಲ.

ವಿಭಾಗ ಪತ್ರ ಆಗುವ ಸಮಯದಲ್ಲಿ ನಾನು ಜನಿಸಿರಲಿಲ್ಲ. ವಿಭಾಗ ಪತ್ರದ ಪಕ್ಷಗಾರರು ಅವರ ಅವರ ಆಸ್ತಿಗಳ ಸ್ವಾಧೀನದಲ್ಲಿ ಪ್ರತ್ಯೇಕವಾಗಿ ವಾಸ ಮಾಡಲು ಶುರು ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಅಂದಿನಿಂದ ಅವರ ಭಾಗದ ಆಸ್ತಿಗಳನ್ನು ಅನುಬೋಗಿಸುತ್ತಾ ಬಂದಿರುತ್ತಾರೆ ಎಂದರೆ ಸರಿ. ನಮ್ಮ ಭಾಗಕ್ಕೆ ಬಂದ ಆಸ್ತಿಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಮತ್ತು ಅವುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನಿಪಿ-1 ವಿಭಾಗ ಪತ್ರದಲ್ಲಿ ಸಿದ್ದಮ್ಮ ಮತ್ತು ಪಾಪ್ಪಣ್ಣರವರಿಗೆ ನೀಡಿದ ಎ ಷೆಡ್ಯೂಲ್ ಆಸ್ತಿಗಳ ಮೇಲೆ ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿ.

ಸಿದ್ದಮ್ಮ ಮತ್ತು ಪಾಪ್ಪಣ್ಣರವರು ಯಾವ ದಿನಾಂಕದಂದು ಯಾವ ಸರ್ವೇ ನಂಬರನಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಪಾಪ್ಪಣ್ಣರವರು ಆಸ್ತಿಯನ್ನು 11 ಮತ್ತು 12 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ ಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುತ್ತೇನೆ. 11 ನೇ ಪ್ರತಿವಾದಿಗೆ ಯಾವ ತಾರೀಖನಂದು ಯಾವ ಸರ್ವೇ ನಂಬರನಲ್ಲಿ ಹಾಗೂ ಎಷ್ಟ ವಿಸ್ತೀರ್ಣದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

12 ನೇ ಪ್ರತಿವಾದಿಗೆ ಯಾವ ತಾರೀಖನಂದು ಯಾವ ಸರ್ವೇ ನಂಬರನಲ್ಲಿ ಹಾಗೂ ಎಷ್ಟ ವಿಸ್ತೀರ್ಣದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. 11 ಮತ್ತು 12 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುವ ಆಸ್ತಿಗಳು ನಿಪಿ-1 ರ ಎ ಷೆಡ್ಯೂಲ್‌ದಾರರಿಗೆ ಬಂದಂತಹ ಆಸ್ತಿ ಎಂದರೆ ಸರಿ. ಮಾರಾಟವಾಗಿರುವ ಆಸ್ತಿಗಳು ಖರೀದಿದಾರರ ಸ್ವಾಧೀನದಲ್ಲಿ ಇರುತ್ತವೆ ಎಂದರೆ ಸರಿ.

ಸಿದ್ದಮ್ಮರವರು ತೀರಿಕೊಂಡ ನಂತರ ನನ್ನ ತಂದೆ ಅಥವಾ ನನ್ನ ಚಿಕ್ಕಪ್ಪ ಪಾಪ್ಪಣ್ಣರವರ ವಿರುದ್ಧ ಭಾಗಂಶ ಕೋರಿ ದಾವೆಯನ್ನು ಸಲ್ಲಿಸಿರುವುದಿಲ್ಲ. ಸಿದ್ದಮ್ಮರವರು ತೀರಿಕೊಂಡ ನಂತರ ಪಾಪ್ಪಣ್ಣರವರು ಎ ಷೆಡ್ಯೂಲ್ ಆಸ್ತಿಗಳ ಖಾತೆಯನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ಬೆಳೆ ಬೆಳೆದು ಉತ್ಪತ್ತಿಯನ್ನು ಅವರೇ ಪಡೆಯುತ್ತಿದ್ದರು ಎಂದರೆ ಸರಿ.

2004 ರಲ್ಲಿ ಪಾಪ್ಪಣ್ಣರವರು ನನ್ನ, ನನ್ನ ತಂದೆ ಹಾಗೂ ಸಿದ್ದನಾಯಕರವರ ವಿರುದ್ಧ ಓ.ಎಸ್ ನಂ.1/2004 ರಂತೆ ಸರ್ವೇ ನಂ.210/1 ರ 33 ಗುಂಟೆಗೆ ಸಂಬಂಧಿಸಿದಂತೆ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾವುಗಳು ಹಾಜರಾಗಿ ಲಿಖಿತ ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ತಕರಾರು ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ. ಸದರಿ ದಾವೆಯಲ್ಲಿ ನಾನಗಲೀ ಅಥವಾ ನನ್ನ ತಂದೆಯಾಗಲೀ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ದಾವೆಯಲ್ಲಿ ನಾನು ನಿಪಿ-10 ರಂತೆ

ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. 2004 ರಲ್ಲಿ ಸದರಿಯವರ ವಿರುದ್ಧ ಭಾಗಂಶ ಕೋರಿ ದಾವೆ ಹಾಕಲು ಯಾವುದೇ ತೊಂದರೆ ಇರಲಿಲ್ಲ. ಸದರಿ ದಾವೆಯನ್ನು ಹಾಕುವ ಸಮಯದಲ್ಲಿ ಸದರಿ ದಾವಾ ಆಸ್ತಿಯ ಖಾತೆ ಪಾಪಣ್ಣರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿಯವರ ಹೆಸರಿನಲ್ಲಿರುವ ಖಾತೆಯನ್ನು ಪ್ರಶ್ನಿಸಿ ನಾನು ಉಪವಿಭಾಗಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವುದಿಲ್ಲ. ಪಾಪಣ್ಣರವರು ತೀರಿಕೊಂಡ ನಂತರ ಅವರ ಹೆಂಡತಿ ಮರಮ್ಮರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಸದರಿಯವರ ಹೆಸರಿನಲ್ಲಿ ಖಾತೆ ವರ್ಗಾವಣೆಯಾದ ಬಾಬ್ತು ನಾನು ಉಪವಿಭಾಗಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವುದಿಲ್ಲ.

ಸದರಿ ದಾವೆ ನಮ್ಮ ವಿರುದ್ಧ ತೀರ್ಮಾನ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿ ಇರುವ ಸಮಯದಲ್ಲಿ ಪಾಪಣ್ಣ ಅದನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಪಾಪಣ್ಣ ತೀರಿಕೊಂಡ ನಂತರ ಅವರ ಹೆಂಡತಿ ಮತ್ತು ಮಕ್ಕಳು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ತೀರ್ಪು ಪಾಪಣ್ಣರವರ ಪರವಾಗಿ ಆಗಿದ್ದರೂ ಸಹ ನಾವು ಈಗಲೂ ಸಾಗುವಳಿ ಮಾಡಲು ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದಂತೆ ಸದರಿ ದಾವೆಯ ದಾವಾ ಆಸ್ತಿಯಲ್ಲಿ ಪಾಪಣ್ಣರವರ ಹೆಂಡತಿ ಮಕ್ಕಳು ಸಾಗುವಳಿ ಮಾಡಲು ನಮ್ಮದು ಯಾವುದೇ ತಕರಾರು ಇರುವುದಿಲ್ಲ.

ನಾನು ನಿಲಸೋಗೆ ಗ್ರಾಮದಲ್ಲಿ ಹುಟ್ಟಿ ಬೆಳೆದಿರುತ್ತೇನೆ. ನನ್ನ ಚುನಾವಣ ಗುರುತಿನ ಚೀಟಿ, ಆಧಾರ ಕಾರ್ಡ ಹಾಗೂ ಪಡಿತರ ಚೀಟಿ ನಿಲಸೋಗೆ ಗ್ರಾಮದ ವಿಳಾಸಕ್ಕೆ ಸಂಬಂಧಿಸಿದಂತೆ ಇರುತ್ತದೆ. ನನ್ನ ತಂದೆಯ ಚುನಾವಣ ಗುರುತಿನ ಚೀಟಿ, ಮತದಾರರ ಪಟ್ಟಿ, ಹಾಗೂ ಪಡಿತರ ಚೀಟಿ ನಿಲಸೋಗೆ ಗ್ರಾಮದ ವಿಳಾಸಕ್ಕೆ ಸಂಬಂಧಿಸಿದಂತೆ ಇರುತ್ತದೆ, ಸಾಕ್ಷಿ ಮುಂದುವರಿದು ಆಧಾರ ಕಾರ್ಡ ಇರಲಿಲ್ಲ ಎಂದು ನುಡಿಯುತ್ತಾರೆ.

ಓ.ಎಸ್ ನಂ.1/2004 ರಲ್ಲಿ ತೀರ್ಮಾನವಾದ ನಂತರ ನಾವು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ನಾನು ಹಾಗೂ ನನ್ನ ತಂದೆಯವರು ನಿಪಿ-12 ರಂತೆ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಮೇಲ್ಮನವಿ ತೀರ್ಪನ್ನು 2 ನೇ ಮೇಲ್ಮನವಿ ಸಲ್ಲಿಸಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ 1, 2 ಮತ್ತು 11 ನೇ ಪ್ರತಿವಾದಿಗಳ ಪರ ಶ್ರೀ ಬಿ.ಎಂ.ಎನ್ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**